ಕ್ರಮಸಂಖ್ಯೆ	ಗ್ರಾಮದ ಹೆಸರು	ವಿಸ್ತೀರ್ಣ (ಎಕರೆಗಳಲ್ಲಿ)
1)	ಬಡಗ ಎಕ್ಕಾರು	188.54
2)	ತೆಂಕ ಎಕ್ಕಾರು	33.09
3)	ವಾಮಂಜೂರು	152.76
4)	ಕಳವಾರ	19.77
5)	ಬಜ್ಪೆ	10.50
6)	ದೇವಲಂತಬೆಟ್ಟು	48.92
7)	ಮುಚ್ಚೂರು	20.24
8)	ಮರವೂರು	12.26
9)	ಬಡಗ ಎಡಪದವು	24.71
10)	ಜಪ್ಪಿ ನಮೊಗ್ರು	24.71
11)	ತೆಂಕ ಎಡಪದವು	46.85
12)	ಕಂದಾವರ	4.94
		587.48 ಅಥವಾ 237.75 ಹೆ

3) ಹಸ್ತಾಂತರಿಸಿದ ಭೂಮಿಯಲ್ಲಿ ವಾಸದ ಮನೆಗಳು ಇವೆ. ಅರಣ್ಯ ಇಲಾಖಾ ವಶದಲ್ಲಿರುವ ಈ ಭೂಮಿಯ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಕರಾವಳಿಯಲ್ಲಿ ಮೀನುಗಾರಿಕೆ ಸೌಲಭ್ಯಗಳು

2880:(3940)

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ) ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ

ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರ ಮೀನುಗಾರರಿಗೆ ಡೀಸೆಲ್ಸ್ ಸಬ್ಸಿಡಿ ಕೊಡುವ ವಿಚಾರದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮವೇನು?

ಆ) ಮೀನುಗಾರಿಕೆಯನ್ನು ಕೃಷಿಯನ್ನಾಗಿ ಪರಿಗಣಿಸುವುದು ಹಾಗೂ ಮೀನುಗಾರರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸುವ ಬಗ್ಗೆ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮವೇನು?

ಇ) ಸಾಂಪ್ರದಾಯಿಕ ಮೀನುಗಾರಿಕೆ (ವಿಲ್‌ನೆಟ್)ಗೆ ಪಡಿತರ ವ್ಯವಸ್ಥೆಯಲ್ಲಿ ಸೀಮೆಎಣ್ಣೆ ಒದಗಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮವೇನು?

ಈ) ದೇಶದ ಕರಾವಳಿ ರಾಜ್ಯಗಳಾದ ಗುಜರಾತ್, ಮಹಾರಾಷ್ಟ್ರ, ಕೇರಳ, ಆಂಧ್ರ ಪ್ರದೇಶ್‌ಗಳಲ್ಲಿ ಮೀನುಗಾರಿಕೆಗೆ ಸಿಗುತ್ತಿರುವ ಈ ಸೌಲಭ್ಯವನ್ನು ಕರ್ನಾಟಕ ಮೀನುಗಾರರಿಗೆ ಒದಗಿಸಲು ಕ್ರಮ ಕೈಗೊಳ್ಳಲಾಗವುದೇ?

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಮಿನುಗಾರಿಕ ಮತ್ತು ಬಂದರು ರಾಜ್ಯ ಸಚಿವರು):

ಅ) ಮೀನುಗಾರರಿಗೆ ಡೀಸೆಲ್ ಮೇಲಿನ ರಾಜ್ಯ ಮಾರಾಟ ಕರದಲ್ಲಿ ಪ್ರತಿ ಲೀಟರ್‌ಗೆ 52 ಪೈಸೆ ಸಹಾಯಧನ ನೀಡಲಾಗುತ್ತದೆ.

ಆ) ಸರ್ಕಾರದ ಅಧಿಸೂಚನೆ ಸಂ: ಎಲ್‌ಎಡಬ್ಲ್ಯೂ 36 ಎಲ್‌ಬಿಎನ್ 95, ದಿನಾಂಕ: 20.10.1995ರಲ್ಲಿ ಜಲಕೃಷಿಯನ್ನು ಕೃಷಿ ಎಂದು ಪರಿಗಣಿಸಲಾಗಿದೆ. ಜಲಕೃಷಿಯು ಮೀನು ಕೃಷಿಯನ್ನು ಸಹ ಒಳಗೊಂಡಿರುತ್ತದೆ. ಆದುದರಿಂದ, ಕೃಷಿಗೆ ಸಿಗುವ ಎಲ್ಲಾ ಸೌಲಭ್ಯಗಳು ಮೀನು ಕೃಷಿಗೆ ಸಹ ಅನ್ವಯಿಸುತ್ತಿದೆ. ಗಂಗಾಮತ ಮತ್ತು ಅದರ 38 ಪರ್ಯಾಯ ಜಾತಿಗಳನ್ನು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಸೇರಸಬೇಕೆಂದು ಪತ್ರ ಸಂಖ್ಯೆ: ಸಕಇ 170 ಎಸ್‌ಎಡಿ 93, ದಿನಾಂಕ: 14.11.1996ರಲ್ಲಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಈ ಪರ್ಯಾಯ ಜಾತಿಗಳಲ್ಲಿ ಮಿನುಗಾರ ಜಾತಿಯೂ ಸಹ ಸೇರಿದೆ.

ಇ) ಸಾಂಪ್ರದಾಯಿಕ ಮೀನುಗಾರಿಕೆಗೆ ಪಡಿತರ ವ್ಯವಸ್ಥೆಯಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯು ಪ್ರತಿ ದೋಣಿಗೆ ಮಾಸಿಕ 130ರಿಂದ 150 ಲೀಟರ್ ಸೀಮೆಎಣ್ಣೆಯನ್ನು ನೀಡಲಾಗುತ್ತಿದೆ.

ಈ) ಗುಜುರಾತ್, ಮಹಾರಾಷ್ಟ್ರ, ಕೇರಳ ಮತ್ತು ಆಂಧ್ರ ಪ್ರದೇಶಗಳಲ್ಲಿ ಮೀನುಗಾರಿಕೆಗೆ ಸೀಮೆ ಎಣ್ಣೆ ಒದಗಿಸುವ ಬಗ್ಗೆ ವಿವರ ಈ ಕೆಳಕಂಡಂತೆ ನೀಡಲಾಗಿದೆ:

1) ಗುಜರಾತ್; ಗುಜರಾತ್ ರಾಜ್ಯದಲಿ ಔಟ್‌ಬೋರ್ಡ್ ಮೋಟಾರ್ ಅಳವಡಿಸಿರುವ ದೋಣಿಗಳಿಗೆ ಮಾಸಿಕ 250 ಲೀಟರ್ ಹಾಗೂ ಇನ್‌ಬೋರ್ಡ್ ಮೋಟಾರು ಅಳವಡಿಸಿರುವ ದೋಣಿಗಳಿಗೆ ಮಾಸಿಕ 60 ಲೀಟರ್ ಸೀಮೆ ಎಣ್ಣೆಯನ್ನು ಸಾರ್ವಜನಿಕ ಪಡಿತರ ವ್ಯವಸ್ಥೆಯಲ್ಲಿ ವಿತರಿಸಲಾಗುತ್ತದೆ ಎಂದು ತಿಳಿದು ಬಂದಿದೆ.

2) ಮಹಾರಾಷ್ಟ್ರ: ಈ ರಾಜ್ಯದಲ್ಲಿ ಸಾಂಪ್ರದಾಯಿ ದೋಣಿಗಳಿಗೆ ಸೀಮೆ ಎಣ್ಣೆಯನ್ನು ಪಡಿತರ ವ್ಯವಸ್ಥೆಯ ಮೂಲಕ ಸರಬರಾಜು ಮಾಡುತ್ತಿಲ್ಲವೆಂದು ತಿಳಿದು ಬಂದಿದೆ.

3) ಕೇರಳ: ಈರಾಜ್ಯದಲ್ಲಿ 15 ಅಶ್ವಶಕ್ತಿಯವರೆಗಿನ ದೋಣಿಗಳಿಗೆ ಮಾಹೆಯಾನ 350 ಲೀಟರ್ ಸೀಮೆಎಣ್ಣೆಯನ್ನು 15 ಅಶ್ವಶಕ್ತಿಗಿಂತ ಹೆಚ್ಚಿನ ಸಾಮರ್ಥ್ಯವುಳ್ಳ ದೋಣಿಗಳಿಗ ಮಾಹೆಯಾನ 400 ಲೀಟರ್ ಸೀಮೆಎಣ್ಣೆಯನ್ನು ಪಡಿತರ ದರದಲ್ಲಿ ನೀಡಲಾಗುತ್ತಿದೆಯೆಂದು ತಿಳಿದು ಬಂದಿದೆ. ಈ ಪ್ರಮಾಣ ಮೀನುಗಾರರ ಒಟ್ಟು ಸೀಮೆಎಣ್ಣೆಯ ಬೇಡಿಕೆಯ ಶೇಕಡ 50ರಷ್ಟು ಮಾತ್ರ ಒದಗಿಸಲಾಗುತ್ತಿದೆ.

4) ಆಂಧ್ರ ಪ್ರದೇಶ: ಈ ರಾಜ್ಯದಲ್ಲಿ ಮೀನುಗಾರರಿಗೆ ಪ್ರತ್ಯೇಕವಾಗಿ ಸೀಮೆಎಣ್ಣೆಯನ್ನು ಪಡಿತರ ದರದ ಮೇಲೆ ನೀಡಲಾಗುತ್ತಿಲ್ಲವೆಂದು ತಿಳಿದು ಬಂದಿದೆ.

ಕರ್ನಾಟಕ ರಾಜ್ಯದಲ್ಲಿ ಸಾಂಪ್ರದಾಯಿಕ ಮೀನುಗಾರಿಕೆ ದೋಣಿಗಳಿಗೆ ಈಗ ನೀಡುತ್ತಿರುವ ಸೀಮೆಎಣ್ಣೆ ಪ್ರಮಾಣವನ್ನು ಹೆಚ್ಚಿಸಲು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯನ್ನು ಕೋರಿಕೊಳ್ಳಲಾಗಿದೆ.

ತುಮಕೂರು-ಹೊನ್ನಾವರ ರಸ್ತೆಗಳ ಅಭಿವೃದ್ಧಿ.

2881::(3927)

ಶ್ರೀ ಡಾ.ಎಂ.ಕರ್ಕಿ (ಕುಮಟಾ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು-ಹೊನ್ನಾವರ ರಸ್ತೆಗಳ 1995-96, 1996-97, 1997-98ರ ಆಯವ್ಯಯದಲ್ಲಿ ಕಾದಿರಿಸಿದ ಹಣವೆಷ್ಟು; ಹಾಗೂ ಖರ್ಚಾದ ಹಣವೆಷ್ಟು; ಉಳಿದ ಹಣವೆಷ್ಟು?

ಆ) ಇದರ ಕಾಮಗಾರಿಗಳನ್ನು ಯಾವಾಗ ಪೂರೈಸಲಾಗುವುದು?